**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ,</u>**

**<u>ಅಂಕೋಲಾ.</u>**

**<u>ಸಿಸಿ ನಂಬರ 368/2020</u>**

**ಪಿರ್ಯಾದಿಃ** **ಸರಕಾರ**

**-ವಿರುದ್ಧ -**

**ಆರೋಪಿತರುಃ** 1.ಸುಭಾಶ ತಂದೆ ಗಂಗಾಧರ ನಾಯ್ಕ
ಪ್ರಾಯಃ 31 ವರ್ಷ, ವೃತ್ತಿಃ ಮೊಬೈಲ್ ಸರ್ವಿಸ್
ಸಾಃ ಹೊನ್ನಿಕೇರಿ, ಅಂಕೋಲಾ ತಾಲೂಕು

2.ರೋಹಿಣಿ ಗಂಡ ಗಂಗಾಧರ ನಾಯ್ಕ
ಪ್ರಾಯಃ 55 ವರ್ಷ, ವೃತ್ತಿಃ ಮನೆವಾರ್ತೆ
ಸಾಃ ಹೊನ್ನಿಕೇರಿ, ಅಂಕೋಲಾ ತಾಲೂಕು

**<u>ದೋಷಾರೋಪಣೆ</u>**

ನಾನು ಪ್ರಶಾಂತ ಬಾದವಾಡಗಿ, ಬಿ.ಎ..,ಎಲ್.ಎಲ್.ಬಿ.,(ಸ್ಪೇ) ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಅಂಕೋಲಾ, ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಮಾಡುತ್ತಿದ್ದೇನೆ..

ದಿನಾಂಕಃ 12-01-2019 ರಂದು ಬೆಳಿಗ್ಗೆ 10-30 ಗಂಟೆಯ ಸುಮಾರಿಗೆ ಅಂಕೋಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ಶಹರದ ಹೊನ್ನಿಕೇರಿಯಲ್ಲಿರುವ ರಮೇಶ ಕೋಲ್ಡಡ್ರಿಂಕ್ಸ ಅಂಗಡಿ ಎದುರಿನ ರಸ್ತೆಯ ಮೇಲೆ ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಪಿರ್ಯಾದಿಯವರಾದ ಅಮರನಾಥ ತಂದೆ ಧಾಕು ನಾಯ್ಕರವರಿಗೆ " ಬೋಳಿಮಕ್ಕಳ, ಸೂಳೆಮಕ್ಕಳ" ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆದ್ದರಿಂದ ನೀವು ಭಾ ದಂ

ಸಂ ಕಲಂ 504 ಜೊತೆಗೆ 34 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ಎರಡನೆಯದಾಗಿ ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶದಿಂದ ಪಿರ್ಯಾದಿಯವರಾದ ಅಮರನಾಥ ತಂದೆ ಧಾಕು ನಾಯ್ಕರವರಿಗೆ ಕೈಯಿಂದ ಮೈ ಮೇಲೆ ಹೊಡೆದಿದ್ದಲ್ಲದೇ, ನಿಮ್ಮ ಪೈಕಿ 2 ನೇ ಆರೋಪಿ ಪಿರ್ಯಾದಿಗೆ ಕೆನ್ನೆಗೆ ಹೊಡೆದಿರುತ್ತೀರಿ. ಆದ್ದರಿಂದ ನೀವು ಭಾ ದಂ ಸಂ ಕಲಂ 323 ಜೊತೆಗೆ 34 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ಮೂರನೆಯದಾಗಿ ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನಿಮ್ಮ ಪೈಕಿ 1 ನೇ ಆರೋಪಿ ನೀವು ಪಿರ್ಯಾದಿಯ ಎದೆಯ ಬಲ ಭಾಗಕ್ಕೆ ಹಲ್ಲಿನಿಂದ ಕಚ್ಚಿರುತ್ತೀರಿ. ಆದ್ದರಿಂದ ನೀವು ಭಾ ದಂ ಸಂ ಕಲಂ 324 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ನಾಲ್ಕನೆಯದಾಗಿ ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನಿಮ್ಮ ಪೈಕಿ 2 ನೇ ಆರೋಪಿ ನೀವು ಪಿರ್ಯಾದಿಗೆ ಜೀವದ ಬೇದರಿಕೆ ಹಾಕಿರುತ್ತೀರಿ. ಆದ್ದರಿಂದ ನೀವು ಭಾ ದಂ ಸಂ ಕಲಂ 506 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

(ಮೇಲಿನ ಅಪರಾಧಗಳನ್ನು ಆರೋಪಿಯಾದ ನೀವು ಇದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮತ್ತು ನನ್ನ ಸಂಜ್ಞೆಯತೆಯಲ್ಲಿ ಮಾಡಿದ್ದರಿಂದ ಸದರಿ ಅಪರಾಧಿಕ ಕಲಂಗಳ ವಿಚಾರಣೆಯನ್ನು ಇದೇ ನ್ಯಾಯಾಲಯದಲ್ಲಿ ನಡೆಯಬೇಕೆಂದು ಈ ಹೊತ್ತು ದಿನಾಂಕಃ ರಂದು ಆದೇಶಿಸುತ್ತೇನೆ.)

ಅಂಕೋಲಾ (ಪ್ರಶಾಂತ ಬಾದವಾಡಗಿ)
ದಿನಾಂಕಃ 27.06.2022 ಪ್ರ ದಂ ನ್ಯಾದಂ, ಅಂಕೋಲಾ.

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ.</u>**

**<u>ಸಿಸಿ ನಂಬರ 368/2020</u>**

ಪಿರ್ಯಾದಿಃ ಸರಕಾರ - ವಿರುದ್ಧ- ಆರೋಪಿ 1. ಸುಭಾಶ ಗಂಗಾಧರ ನಾಯ್ಕ

ಪ್ರ 1 ಮೇಲೆ ಓದಿ ಹೇಳಲಾದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರ 2 ಸದರಿ ದೋಷಾರೋಪಣೆಗೆ ನಿಮ್ಮ ಉತ್ತರವೇನು?

ಉತ್ತರಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ)

ದಿನಾಂಕಃ - -2022 (ಪ್ರಶಾಂತ ಬಾದವಾಡಗಿ)
ಅಂಕೋಲಾ ಪ್ರ ದ ನ್ಯಾದಂ, ಅಂಕೋಲಾ.

ಆರೋಪಿಯ ಸಹಿ

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ.</u>**

**<u>ಸಿಸಿ ನಂಬರ 368/2020</u>**

ಪಿರ್ಯಾದಿಃ ಸರಕಾರ - ವಿರುದ್ಧ- ಆರೋಪಿ 2.ರೋಹಿಣಿ ಗಂಗಾಧರ ನಾಯ್ಕ

ಪ್ರ 1 ಮೇಲೆ ಓದಿ ಹೇಳಲಾದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರ 2 ಸದರಿ ದೋಷಾರೋಪಣೆಗೆ ನಿಮ್ಮ ಉತ್ತರವೇನು?

ಉತ್ತರಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ)

ದಿನಾಂಕಃ - -2022. (ಪ್ರಶಾಂತ ಬಾದವಾಡಗಿ)
ಅಂಕೋಲಾ ಪ್ರ ದ ನ್ಯಾದಂ, ಅಂಕೋಲಾ.

ಆರೋಪಿಯ ಸಹಿ